ಹಿಂಬದಿಯಲ್ಲಿದ್ದ ಉದ್ದ ಜಡೆಯನ್ನು ನೆತ್ತಿಯ ಮೇಲೆ ಬರುವಂತೆ ಮೇಲೆತ್ತಿ ಹಿಡಿದು ಕುತ್ತಿಗೆಯ ಹಿಂಭಾಗವನ್ನು ಎಡಗೈಯಿಂದ ನಿರ್ದೇಶಿಸಿದಳು.

"ರೂಪಾಯಷ್ಟು ಅಗಲಕ್ಕೆ ಕೆಂಪಗೆ ದದ್ದರಿಸಿದೆ ಅತ್ತೇ. ಇರುವೇನೇ ಕಚ್ಚಿದ್ದಿರ್ಬೇಕು..." ಶುಭದಾ ಹೇಳಿ ಮುಗಿಸುವುದಕ್ಕಿಲ್ಲ, ಮಗಳು ಏನು ಕಾರುಬಾರು ನಡೆಸಿದ್ದಾಳೆಂದು ನೋಡುವ ಕುತೂಹಲದಿಂದ ಮನೆಗೆ ಬಂದಿದ್ದ ನೆಂಟತಿಯರಿಬ್ಬರನ್ನು ಜೊತೆಗಿಟ್ಟುಕೊಂಡು ಸೌಭಾಗ್ಯ ಕೋಣೆ ಹೊಕ್ಕಳು.



"ಏನು ನಡೀತಿದೆ ಇಲ್ಲಿ? ಅತ್ತೆ, ಸೊಸೆ ಇಬ್ರೂ ಅವಾಗಿಂದ ಕೋಣೆ ಹೊಕ್ಕಂಡಿದೀರಿ..."

ಮುಖಕ್ಕೆ ಹಚ್ಚಿದ ಲೇಪನ ಬಾಯಿ ಅಲುಗಿಸಿದರೆ ಬಿರಿಯುವುದೆನ್ನುವ ಎಚ್ಚರಿಕೆ ವಹಿಸಿ ಹೇಳಿದಳು ಶುಭದಾ,

"ಏನಾದ್ರೂ ಆಯಿಂಟ್ಮೆಂಟ್ ಇದ್ರೆ ತಗೊಂಬಾ ಅಮ್ಮಾ. ಎಂತದೋ ಹುಳಾನೋ, ಇರುವೇನೋ ಕಚ್ಚಿದ್ದಿರ್ಬೇಕು,

ಚಿತ್ರಗಳು: ಎಸ್.ವಿ. ಹೂಗಾರ

